ಶ್ರೀ ಎಸ್. ಆರ್. ಬೊಮ್ಮಾಯಿ.—ಒಳ್ಳೆಯ ಸಂಪ್ರದಾಯವನ್ನು ನಾವು ನೀವು ಕೂಡಿ ಹಾಕ ಬೇಕೆಂದು ಹೇಳುತ್ತೇನೆ. ಉಭಯತ್ರರೂ ಪ್ರಜಾಪ್ರಭುತ್ವದ ನೀತಿಯನ್ನು ಕಾಯ್ದುಕೊಂಡು ಹೋಗುವುದಕ್ಕೆ ಸತ್‌ಸಂಪ್ರದಾಯ ಹಾಕೋಣ ಎಂಬ ಆಶಯವನ್ನು ವ್ಯಕ್ತ ಮಾಡಿ ಮಾನ್ಯ ಲಕ್ಷ್ಮೀಸಾಗರ್ ಅವರಿಗೂ, ಇತರ ಪದಾಧಿಕಾರಿಗಳಾದ ಶ್ರೀ ಕೆ. ಪೆಚ್. ಶ್ರೀನಿವಾಸ್ ಅವರಿಗೂ, ಕಕ್ಕಿಲಾಯ ಅವರಿಗೂ ರಾಮದೇವ್ ಅವರಿಗೂ ಶುಭ ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ಗುಂಡೂರಾವ್.—ಲಕ್ಷ್ಮೀಸಾಗರ್ ಅವರಿಗೆ ಮದುವೆ ಮಾಡಿಸುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾಡಿಸೋಣ.

ಶ್ರೀ ಜೆ. ಹೆಚ್. ಪಟೇಲ್.—ಗಂಡು ನಮ್ಮ ಕಡೆ ಇದೆ. ಹೆಣ್ಣು ನಿಮ್ಮ ಕಡೆ ಇದ್ದರೆ ಹೇಳಿ.

ಶ್ರೀ ಆರ್. ಗುಂಡೂರಾವ್.—ನಮ್ಮ ಕಡೆ ಮದುವೆಯಾಗದೇ ಇರುವವರು ಒಬ್ಬರಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ವಿರೋಧಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೇ, ನನಗೆ ಹೊಸ ಜವಾಬ್ದಾರಿಯನ್ನು ನನ್ನ ಎಲ್ಲ ಸ್ನೇಹಿತರೂ ಕೊಟ್ಟಿದ್ದಾರೆ. ಈ ಜವಾಬ್ದಾರಿಯನ್ನು ತೆಗೆದುಕೊಳ್ಳುತಕ್ಕ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸ್ವಾಗತ ಮಾಡಿದ್ದಾರೆ. ವಿರೋಧಪಕ್ಷದ ನಾಯಕನಾಗಿ ಕೆಲಸ ಮಾಡತಕ್ಕ ಶಕ್ತಿಸಾಮರ್ಥ್ಯ ನನಲ್ಲಿ ಇಲ್ಲವೆ ಹೋದರೂ ಸೌಜನ್ಯಭಾವದಿಂದ ನಮ್ಮ ಸ್ನೇಹಿತರು ನನ್ನನ್ನು ನಾಯಕನನ್ನಾಗಿ ಆರಿಸಿದ್ದಾರೆ. ವಿರೋಧಪಕ್ಷದ ನಾಯಕನಾಗಿ ನಾನು ನನ್ನ ಶಕ್ತಿ ಮೀರಿ ಕೆಲಸ ಮಾಡುತ್ತೇನೆಂಬ ಭರವಸೆಯನ್ನು ನಮ್ಮ ಸ್ನೇಹಿತರಿಗೆ ಮತ್ತು ಮಾನ್ಯ ಮುಖ್ಯ ಮಂತ್ರಿಗಳಿಗೆ ಕೊಡುವುದಕ್ಕೆ ಇಚ್ಛಿಪಡುತ್ತೇನೆ. ವಿರೋಧಪಕ್ಷದವರು ಟೀಕೆಟಿಪ್ಪಣಿಗಳನ್ನು ಮಾಡುವಾಗ ರಚನಾತ್ಮಕವಾದ ಟೀಕೆ ಮಾಡಬೇಕೆಂದು ಹೇಳಿದ್ದಾರೆ. ಸರ್ಕಾರದವರು ಮಾಡತಕ್ಕ ಕೆಲಸ ಕಾರ್ಯಗಳನ್ನು ಅನುಸರಿಸಿ ನಾವು ಟೀಕೆ ಟಿಪ್ಪಣಿಗಳನ್ನು ಮಾಡಬೇಕಾಗುತ್ತದೆ. ಒಂದು ಸಾರಿ ಬಾಲಗಂಗಾಧರ ತಿಲಕ್ ಅವರು "Opposition extends responsive co-operation" ಎಂದು ಹೇಳಿದರು. ಅದನ್ನು ಮಾಡುವುದಕ್ಕೆ ನಾವು ಸಿದ್ಧರಾಗಿದ್ದೇವೆ. ನಾನು ಆ ಕೆಲಸವನ್ನು ಮಾಡುವುದಕ್ಕೆ ತಾವುಗಳೆಲ್ಲರೂ ಕೂಡ ನನಗೆ ಸಹಾಯ ಮತ್ತು ಬೆಂಬಲ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರಿಗೆ ಮತ್ತು ನನ್ನ ಎಲ್ಲ ಸ್ನೇಹಿತರಿಗೂ ಧನ್ಯವಾದಗಳನ್ನರ್ಪಿಸುತ್ತೇನೆ.

ಅಧ್ಯಕ್ಷರು.—ವಿರೋಧಪಕ್ಷದ ನಾಯಕರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತಾ, ಈಗಿನ ನಾಯಕರು ಮತ್ತು ಬೇರೆ ಸದಸ್ಯರು ಏನು ಮಾತನಾಡಿದ್ದಾರೆ ಅವರ ಮಾತಿಗೆ ನನ್ನ ಧ್ವನಿಯನ್ನು ಕೂಡಿಸುತ್ತಾ, ವಿರೋಧ ಪಕ್ಷದಿಂದ ಹೆಚ್ಚಿನ ಸಹಕಾರ ಈ ಒಂದು ಸ್ಥಾನದಲ್ಲಿರತಕ್ಕ ನನಗೂ ಕೂಡಾ ಬರುತ್ತದೆಂದು ನಿರೀಕ್ಷೆ ಮಾಡುತ್ತಾ, ವೈವಿದ್ಯವಾಗಿ ನಾವು ಕೆಲಸ ಮಾಡುವುದಕ್ಕೆ ಅನುಕೂಲ ಆಗತಕ್ಕ ಒಂದು ವಾತಾವರಣ ಆಗಲಿ ಎಂದು ಬಯಸುತ್ತಾ ನಾನೂ ಕೂಡಾ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

PAPERS LAID ON THE TABLE

SRI R. GUNDU RAO (Chief Minister).—Sir, I beg to lay.

Order No. HD 213 CNA 81 dated 5th February 1982.

Exemption under the provisions of the Karnataka Cinemas (Regulation) Act, 1964 to Vijayaranga Theature, Balbhavan, Bangalore.

as required under Section 22 of the Karnataka Cinemas (Regulation) Act, 1964.

SRI G. H. ASWATHAREDDY (Minister of State for Power).—Sir, I beg to lay.

Annual Accounts with Report and balance sheet for the year 1979-80 of the Karnataka State Electricity Board,

as required under Section 69 of the Electricity (Supply) Act, 1948.

MR. SPEAKER.—Papers are laid.